ಶ್ರೀ ಡಿ ಟಿ ಜಯಕುಮಾರ್ (ವಸತಿ ಸಚಿವರು)

ಅ) ಮತ್ತು ಆ) ಕರ್ನಾಟಕ ಗೃಹ ಮಂಡಳಿ ವತಿಯಿಂದ ನಗರದ ಬಡ ಜನರಿಗೆ ಪ್ರತ್ಯೇಕವಾಗಿ ಸಹಭಾಗಿತ್ವದಲ್ಲಿ ಮನೆಗಳನ್ನು ನಿರ್ಮಿಸುವ ಪ್ರಸ್ತಾವನೆ ಇರುವುದಿಲ್ಲ

537(353) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಮೈಸೂರು ನಗರದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ವಿವರ ನೀಡುವುದು,

ಆ) ಈ ಕಾಲೇಜುಗಳಲ್ಲಿನ ವಿಷಯವಾರು ವಿದ್ಯಾರ್ಥಿಗಳ ಸಂಖ್ಯೆ ತಿಳಿಸುವುದು,

ಇ) ಈ ಕಾಲೇಜುಗಳಲ್ಲಿ ಖಾಲಿ ಇರುವ ಕೊರಡಿಗಳ ಸಂಖ್ಯೆ ಎಷ್ಟು,

ಈ) ಈ ಕಾಲೇಜುಗಳಲ್ಲಿ ಹಾಲಿ ಇರುವ ಶಿಕ್ಷಕ ಹಾಗೂ ಶಿಕ್ಷಕೇತರ ಸಿಬ್ಬಂದಿಗಳ ವಿವರ ನೀಡುವುದು,

ಉ) ಈ ಕಾಲೇಜುಗಳಲ್ಲಿ ಎಷ್ಟು ಕೊರಡಿಗಳು ಹಾಗೂ ಸಿಬ್ಬಂದಿಗಳ ಕೊರತೆ ಇದೆ ಎಂಬುದನ್ನು ವಿಷಯವಾರು ತಿಳಿಸುವುದು?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಮೈಸೂರು ನಗರದಲ್ಲಿ ಒಟ್ಟು 11 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿವೆ ಅದರ ವಿವರ ಈ ಕೆಳಕಂಡಂತಿದೆ

1 ಮಹಾರಾಜ ಸ ಪ ಪೂ ಕಾಲೇಜು 2 ಮಹಾರಾಣಿ ಸ ಪ ಪೂ ಕಾಲೇಜು 3 ವಿಭಜಿತ ಮಹಾರಾಜ ಸ ಪ ಪೂ ಕಾಲೇಜು 4 ಬಾಲಕಿಯರ ಸ ಪ ಪೂ ಕಾಲೇಜು 5 ಸ ಪ ಪೂ ಕಾಲೇಜು, ಲಕ್ಷ್ಮೀಪುರಂ 6 ಬಾಲಕಿಯರ ಸ್ವತಂತ್ರ ಸ ಪ ಪೂ ಕಾಲೇಜು, ಕೇಸರಿ 7 ಸ ಪ ಪೂ ಕಾಲೇಜು, ಒಂಟಿಕೊಪ್ಪಲು 8 ದೇವರಾಜ ಬಾಲಕಿಯರ ಸ ಪ ಪೂ ಕಾಲೇಜು

9 ಸ ಪ ಪೂ ಕಾಲೇಜು, ಮಂಚೇಗೌಡನ ಕೊಪ್ಪಲು 10 ಸ ಪ ಪೂ ಕಾಲೇಜು, ಕುವೆಂಪುನಗರ 11 ಸ ಪ ಪೂ ಕಾಲೇಜು, ಜೋಡಿರಸ್ತೆ

ಆ) ಕಲಾ ವಿಭಾಗ–4593, ವಿಜ್ಞಾನ ವಿಭಾಗ–1369 ಮತ್ತು ವಾಣಿಜ್ಯ ವಿಭಾಗ–1369 ವಿದ್ಯಾರ್ಥಿಗಳಿರುತ್ತಾರೆ

ಇ) ಈ ಕಾಲೇಜುಗಳಲ್ಲಿ ಹಾಲಿ ಇರುವ ಕೊರಡಿಗಳ ಸಂಖ್ಯೆ 114

ಈ) ಈ ಕಾಲೇಜುಗಳಲ್ಲಿ ಹಾಲಿ 195 ಶಿಕ್ಷಕ ಹಾಗೂ 21 ಶಿಕ್ಷಕೇತರ ಸಿಬ್ಬಂದಿಗಳಿರುತ್ತಾರೆ

ಉ) ಈ ಕಾಲೇಜುಗಳಲ್ಲಿ 119 ಕೊರಡಿಗಳ ಕೊರತೆ ಇರುತ್ತದೆ ಕೊರತೆ ಇರುವ 28 ಉಪನ್ಯಾಸಕರ ಹುದ್ದೆಗಳ ವಿವರ ಈ ಕೆಳಕಂಡಂತಿದೆ

ಇತಿಹಾಸ–03, ಅರ್ಥಶಾಸ್ತ್ರ–04, ಗಣಿತಶಾಸ್ತ್ರ–01, ರಾಜ್ಯಶಾಸ್ತ್ರ–02, ಸಮಾಜಶಾಸ್ತ್ರ–02, ವಾಣಿಜ್ಯಶಾಸ್ತ್ರ–02, ಕನ್ನಡ–06, ಇಂಗ್ಲೀಷ್–07, ಸಂಸ್ಕೃತ–01

ಬೋಧಕೇತರರು ಅಧೀಕ್ಷಕರು–1, ಪ್ರ.ದ.ಸ.–03, ದ್ವಿ.ದ.ಸ.–06, ಲೈಬ್ರರಿಯನ್–01, ದೈಹಿಕ ಶಿಕ್ಷಕರು–01, ಲ್ಯಾಬ್ ಅಟೆಂಡರ್–05 ಮತ್ತು ಡಿ ದರ್ಜೆ–11 ಸಿಬ್ಬಂದಿಗಳ ಕೊರತೆ ಇರುತ್ತದೆ

538(354) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಮೈಸೂರು ನಗರದಲ್ಲಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ವಿವರ ನೀಡುವುದು,

ಆ) ಈ ಶಾಲೆಗಳ ಪೈಕಿ ಯಾವ ಶಾಲೆಗಳು ಸ್ವಂತ ಕಟ್ಟಡ ಹೊಂದಿವೆ, ಯಾವ ಶಾಲೆಗಳು ಬಾಡಿಗೆ ಕಟ್ಟಡದಲ್ಲಿವೆ, ವಿವರ ನೀಡುವುದು,

ಇ) ಈ ಶಾಲೆಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆಯನ್ನು ತರಗತಿವಾರು ತಿಳಿಸುವುದು, ಈ ಶಾಲೆಗಳಲ್ಲಿ ಹಾಲಿ ಇರುವ ಕೊರಡಿಗಳು ಹಾಗೂ ಕೊರತೆ ಇರುವ ಕೊರಡಿಗಳ ಸಂಖ್ಯೆ ಎಷ್ಟು,

ಈ) ಕೊರತೆ ಇರುವ ಕೊರಡಿಗಳ ನಿರ್ಮಾಣಕ್ಕೆ ಸರ್ಕಾರ ಯಾವ ಕ್ರಮ ವಹಿಸಿದೆ ವಿವರ ನೀಡುವುದು?